# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1417 (1671) |
| ಮಾನ್ಯ ಸದಸ್ಯರ ಹೆಸರು | ಶ್ರೀ ಹೆಚ್.ಎಸ್.ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) |
| ಉತ್ತರಿಸುವ ದಿನಾಂಕ | 18-03-2026 |
| ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ | ಕಾವೇರಿ-2 ತಂತ್ರಾಂಶದ ಮೂಲಕ ಆಸ್ತಿ ನೋಂದಣಿ ಮಾಡಲು ನಾಗರೀಕರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಸಮಸ್ಯೆ ಬಗೆಹರಿಸಲು ಸರ್ಕಾರ ಕೈಗೊಂಡ ಕ್ರಮವೇನು; | ಕಾವೇರಿ-2.0 ತಂತ್ರಾಂಶವನ್ನು ಜೂನ್-2023ರಲ್ಲಿ ಅಭಿವೃದ್ಧಿಪಡಿಸಿ ಅನುಷ್ಠಾನಗೊಳಿಸಲಾಗಿದ್ದು, ಈ ತಂತ್ರಾಂಶದಲ್ಲಿ ನೋಂದಣಿ ಪ್ರಕ್ರಿಯೆಯು ಸ್ಥಿರತೆ ಹೊಂದಿರುತ್ತದೆ. ತಂತ್ರಾಂಶದ ನಿರಂತರ ಅಭಿವೃದ್ಧಿ ಹಾಗೂ ವಿಸ್ತರಣೆಯಿಂದಾಗಿ (ಉದಾ: ಇ-ಸ್ವತ್ತು, ಇ-ಆಸ್ತಿ ಹಾಗೂ ಇತರೆ ತಂತ್ರಾಂಶಗಳ ಸಂಯೋಜನೆ) ಕೆಲವು ತಾಂತ್ರಿಕ ಸವಾಲುಗಳು ಎದುರಾಗುತ್ತದೆ, ಅವುಗಳನ್ನು ಆದ್ಯತೆಯ ಮೇರೆಗೆ ಪರಿಹರಿಸಲಾಗುತ್ತದೆ.<br><br>ದಸ್ತಾವೇಜುಗಳ ನೋಂದಣಿಗೆ ಕಾವೇರಿ-2.0 ತಂತ್ರಾಂಶವನ್ನು ಇತರೆ ಇಲಾಖೆಗಳ ತಂತ್ರಾಂಶಗಳೊಂದಿಗೆ ಸಂಯೋಜಿಸಲಾಗಿರುತ್ತದೆ. ಕೃಷಿ ಭೂಮಿಯ ನೋಂದಣಿಗೆ ಭೂಮಿ ಹಾಗೂ ಮೋಜಿಣಿ ತಂತ್ರಾಂಶ, ಕೃಷಿಯೇತ್ತರ ಸ್ವತ್ತುಗಳ ನೋಂದಣಿಗೆ ಇ-ಸ್ವತ್ತು, ಇ-ಆಸ್ತಿ ಹಾಗೂ ಯುಎಲ್ ಎಂಎಸ್ ತಂತ್ರಾಂಶ, ಶುಲ್ಕಗಳ ಪಾವತಿಗೆ ಖಜಾನೆ-2 ತಂತ್ರಾಂಶ, ನಿಗದಿತ ಅವಧಿಯಲ್ಲಿ ಸೇವೆ ಒದಗಿಸಲು ಸಕಾಲ ತಂತ್ರಾಂಶ, ಕೃಷಿ ಸಾಲ ದಸ್ತಾವೇಜುಗಳ ನೋಂದಣಿಗೆ ಫ್ರೂಟ್ಸ್ ತಂತ್ರಾಂಶ, ಪಕ್ಷಕಾರರ ಗುರುತಿನ ದೃಢೀಕರಣಕ್ಕೆ ಆಧಾರ್ ತಂತ್ರಾಂಶದೊಂದಿಗೆ ಕಾವೇರಿ-2.0 ತಂತ್ರಾಂಶವನ್ನು ಸಂಯೋಜಿಸಲಾಗಿರುತ್ತದೆ. ಸದರಿ ತಂತ್ರಾಂಶಗಳಲ್ಲಿ ಯಾವುದೇ ಸಮಸ್ಯೆಗಳು ಉಂಟಾದಲ್ಲಿ ಇದರ ಪ್ರಭಾವ ಕಾವೇರಿ-2.0 ತಂತ್ರಾಂಶದಲ್ಲಿ ದಸ್ತಾವೇಜಿನ ನೋಂದಣಿ ಮೇಲೂ ಬೀರುತ್ತದೆ. ಈ ರೀತಿಯ ಸಮಸ್ಯೆಗಳು ಉಂಟಾದಲ್ಲಿ ಸಂಬಂಧಪಟ್ಟ ಇಲಾಖೆಗಳೊಂದಿಗೆ ಸಂಪರ್ಕಿಸಿ ತ್ವರಿತವಾಗಿ ಪರಿಹರಿಸಲು ಕ್ರಮಕೈಗೊಳ್ಳಲಾಗುತ್ತದೆ.<br><br>ಮೇಲೆ ತಿಳಿಸಿರುವ ಸಮಸ್ಯೆಗಳ ಹೊರತಾಗಿ ಕಾವೇರಿ-2.0 ತಂತ್ರಾಂಶದಲ್ಲಿ ತಾಂತ್ರಿಕ ಸಮಸ್ಯೆಗಳಿಂದ ನೋಂದಣಿಗೆ ಅಡಚಣೆಯಾದಲ್ಲಿ ಅವುಗಳನ್ನು ತಕ್ಷಣ ಪರಿಹರಿಸಲು ಇಲಾಖೆಯು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿರುತ್ತದೆ.<br>1. **ಸಹಾಯವಾಣಿ:** ನೂತನ ತಂತ್ರಾಂಶದಲ್ಲಿ Public Interface ಇರುವುದರಿಂದ ಸಾರ್ವಜನಿಕರು ಆನ್‌ಲೈನ್ ಮುಖಾಂತರ ಅರ್ಜಿ ಸಲ್ಲಿಸುವ ಸಂದರ್ಭದಲ್ಲಿ ಎದುರಿಸುವ ಸಮಸ್ಯೆಗಳನ್ನು ವ್ಯವಸ್ಥಿತವಾಗಿ ಪರಿಹರಿಸಲು ಸಕಾಲ ಕರೆ ಕೇಂದ್ರದ ಸಹಯೋಗದೊಂದಿಗೆ ಇಲಾಖೆಯ ಸಹಾಯವಾಣಿಯನ್ನು (080-68265316) ಪ್ರಾರಂಭಿಸಲಾಗಿರುತ್ತದೆ.<br>2. **ಟಿಕೇಟಿಂಗ್ ಟೂಲ್:** ಉಪನೋಂದಣಿ |

| | | |
|---|---|---|
| | | ಕಛೇರಿಯಲ್ಲಿನ ಅಧಿಕಾರಿ ಹಾಗೂ ಸಿಬ್ಬಂದಿಗಳಿಗೆ ಟಿಕೇಟಿಂಗ್ ಟೂಲ್ ಒದಗಿಸಲಾಗಿದ್ದು, ತಂತ್ರಾಂಶದಲ್ಲಿ ಉಂಟಾಗುವ ತಾಂತ್ರಿಕ ಸಮಸ್ಯೆಗಳನ್ನು ಕೂಡಲೇ ಸದರಿ ಟೂಲ್ ಮುಖಾಂತರ ಆನ್‌ಲೈನ್‌ನಲ್ಲಿ ತಾಂತ್ರಿಕ ತಂಡಕ್ಕೆ ತಿಳಿಸಬಹುದಾಗಿದೆ.<br>3. **ಸರ್ವೀಸ್ ಡೆಸ್ಕ್:** ಉಪನೋಂದಣಿ ಕಛೇರಿಗಳಲ್ಲಿ ನೋಂದಣಿ ಸಮಯದಲ್ಲಿ ಎದುರಾಗುವ ತಾಂತ್ರಿಕ ಸಮಸ್ಯೆಗಳನ್ನು ಕೂಡಲೇ ಪರಿಹರಿಸಲು ಕೇಂದ್ರ ಕಛೇರಿಯಲ್ಲಿ 08 ತಾಂತ್ರಿಕ ಸಿಬ್ಬಂದಿಗಳನ್ನೊಳಗೊಂಡ ಸರ್ವೀಸ್ ಡೆಸ್ಕ್ ಸ್ಥಾಪಿಸಲಾಗಿರುತ್ತದೆ.<br>4.**ಅಪ್ಲೀಕೇಷನ್ ಸಪೋರ್ಟ್ ಇಂಜಿನಿಯರ್ ಹಾಗೂ ಸಿಸ್ಟಂ ಅಡ್ಮೀನ್:** ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಸಿಸ್ಟಂ ಅಡ್ಮೀನ್ ಹಾಗೂ ಅಪ್ಲೀಕೇಷನ್ ನ ಸಪೋರ್ಟ್ ಇಂಜಿನಿಯರ್‌ಗಳನ್ನು ನೇಮಿಸಲಾಗಿರುತ್ತದೆ. ಹಾರ್ಡ್‌ವೇರ್‌ನಲ್ಲಿನ ಸಮಸ್ಯೆಗಳನ್ನು ನಿರ್ವಹಿಸಲು ಸಿಸ್ಟಂ ಅಡ್ಮೀನ್‌ಗಳು ಹಾಗೂ ತಂತ್ರಾಂಶದಲ್ಲಿನ ಸಮಸ್ಯೆಗಳನ್ನು ನಿರ್ವಹಿಸಲು ಅಪ್ಲೀಕೇಷನ್ ಸಪೋರ್ಟ್ ಇಂಜಿನಿಯರ್‌ಗಳು ಸಹಕರಿಸುತ್ತಿರುತ್ತಾರೆ.<br>5. **ಕಾವೇರಿ ಯೋಜನಾ ಉಸ್ತುವಾರಿ ಘಟಕ (KPUM):** ಕೇಂದ್ರ ಕಛೇರಿಯಲ್ಲಿ 05 ತಾಂತ್ರಿಕ ಸದಸ್ಯರನೊಳಗೊಂಡ ಕಾವೇರಿ ಯೋಜನಾ ಉಸ್ತುವಾರಿ ಘಟಕವನ್ನು ಸ್ಥಾಪಿಸಲಾಗಿರುತ್ತದೆ. ಈ ತಂಡವು ತಂತ್ರಾಂಶದ ಅಭಿವೃದ್ಧಿ, ನಿರ್ವಹಣೆ ಮತ್ತು ಕಾರ್ಯಾಚರಣೆಯಲ್ಲಿ ಸೆಂಟರ್ ಫಾರ್ ಸ್ಮಾರ್ಟ್ ಗೌರನೆನ್ಸ್ ಸಂಸ್ಥೆಗೆ ಅಗತ್ಯ ತಾಂತ್ರಿಕ ಮಾಹಿತಿ ಒದಗಿಸುತ್ತಿದೆ.<br>6. **ಯುಟ್ಯೂಬ್ ಚಾನಲ್:** ಕಾವೇರಿ ತಂತ್ರಾಂಶದಲ್ಲಿ ವಿವಿಧ ಸೇವೆಗಳನ್ನು ಪಡೆಯಲು ಸಾರ್ವಜನಿಕರು ಅನುಸರಿಸಬೇಕಾದ ಕ್ರಮಗಳ ಬಗ್ಗೆ ವಿಡಿಯೋ ಟುಟೋರಿಯಲ್‌ಗಳನ್ನು ಸಿದ್ಧಪಡಿಸಿ ಇಲಾಖೆಯ ಯುಟ್ಯೂಬ್ ಚಾನಲ್ ನಲ್ಲಿ ಒದಗಿಸಲಾಗಿರುತ್ತದೆ.<br>7.**ಪೋಸ್ಟರ್:** ಕಾವೇರಿ-2 ತಂತ್ರಾಂಶದ ಬಗ್ಗೆ ಮಾಹಿತಿಯನ್ನು ನೀಡಲು ರಾಜ್ಯದ ಎಲ್ಲಾ ನೋಂದಣಿ ಕಛೇರಿಗಳಲ್ಲಿ ಪ್ರದರ್ಶಿಸಲಾಗಿರುತ್ತದೆ.<br>**8.ತರಬೇತಿ:** i) ಅಧಿಕಾರಿ / ಸಿಬ್ಬಂದಿ : ಇಲಾಖೆಯ ಎಲ್ಲಾ ಅಧಿಕಾರಿ / ಸಿಬ್ಬಂದಿಗಳಿಗೆ ಕೇಂದ್ರ ಕಛೇರಿಯ ಗಣಕೀಕರಣ ತರಬೇತಿ ಕೋಶದಲ್ಲಿ ಕಾವೇರಿ-2.0 ತಂತ್ರಾಂಶದ ತರಬೇತಿ ನೀಡಲಾಗಿರುತ್ತದೆ.<br>ii)ಸಾರ್ವಜನಿಕರು / ದಸ್ತಾವೇಜು ಬರಹಗಾರರು / ವಕೀಲರು : ತಾಲ್ಲೂಕು ಹಾಗೂ ಜಿಲ್ಲಾ ಕೇಂದ್ರಗಳಲ್ಲಿ ಕಾರ್ಯಾಗಾರಗಳನ್ನು ನಡೆಸಿ ತಂತ್ರಾಂಶದ ಬಳಕೆ ಹಾಗೂ ತಂತ್ರಾಂಶದ ಮೂಲಕ ಸೇವೆಗಳನ್ನು ಪಡೆಯುವ ಬಗ್ಗೆ ಮಾಹಿತಿ ನೀಡಲಾಗಿರುತ್ತದೆ. |
| ಆ | ಬೆಂಗಳೂರು ನಗರ ಜಿಲ್ಲೆಯಲ್ಲಿ ಈ ತಂತ್ರಾಂಶದ ಮೂಲಕ ಪ್ರತಿ ದಿನ ಎಷ್ಟು ಆಸ್ತಿ ನೋಂದಣಿ ಮಾಡಲಾಗುತ್ತಿದೆ; ಇದುವರೆವಿಗೂ ಎಷ್ಟು ಆಸ್ತಿ ನೋಂದಣಿ ಮಾಡಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು); | ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಿದೆ. |

| | | |
|---|---|---|
| ಇ | ಆಸ್ತಿ ನೋಂದಣಿ ಮಾಡಲು ನಾಗರೀಕರಿಗೆ ತಾಂತ್ರಿಕ ದೋಷದ ಕಾರಣ ಹೇಳಿ ವಿನಾ ಕಾರಣ ತೊಂದರೆ ಮಾಡಿರುವ ಅಧಿಕಾರಿಗಳ ಮೇಲೆ ದೂರುಗಳು ಬಂದಿದೆಯೇ; ಎಷ್ಟು ದೂರು ಸ್ವೀಕೃತವಾಗಿದೆ; ಈ ಬಗ್ಗೆ ಸರ್ಕಾರವು ಈ ಅಧಿಕಾರಿಗಳ ಮೇಲೆ ಯಾವ ಕ್ರಮ ಕೈಗೊಂಡಿದೆ? | ಆಸ್ತಿ ನೋಂದಣಿಯಲ್ಲಿ ತಾಂತ್ರಿಕ ದೋಷದ ಕಾರಣ ನೀಡಿ ವಿನಾ ಕಾರಣ ತೊಂದರೆ ಮಾಡುತ್ತಿರುವ ಬಗ್ಗೆ ದೂರುಗಳು ಬಂದಿರುವುದಿಲ್ಲ.<br><br>ಕಾವೇರಿ-2.0 ತಂತ್ರಾಂಶದಲ್ಲಿ ದಸ್ತಾವೇಜಿನ ನೋಂದಣಿಗೆ ಸಾರ್ವಜನಿಕರ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸಬೇಕಾಗಿರುತ್ತದೆ. ಈ ರೀತಿ ಸಲ್ಲಿಕೆಯಾದ ಅರ್ಜಿಗಳನ್ನು ಉಪನೋಂದಣಾಧಿಕಾರಿಗಳು First In First Out (FIFO) ಮಾದರಿಯಲ್ಲಿ ಪರಿಶೀಲಿಸಿ ಶುಲ್ಕಗಳ ಪಾವತಿಗೆ ಸಿಟಿಜನ್ ಲಾಗಿನ್‌ಗೆ ಹಿಂದಿರುಗಿಸಬೇಕಾಗುತ್ತದೆ. ಒಂದು ವೇಳೆ ಸಲ್ಲಿಕೆಯಾದ ಅರ್ಜಿಯಲ್ಲಿ ಯಾವುದೇ ಲೋಪಗಳಿದ್ದಲ್ಲಿ ಅದರ ಬಗ್ಗೆ ಷರಾ ನಮೂದಿಸಿ ಅದನ್ನು ಸರಿಪಡಿಸಿ ಮತ್ತೊಮ್ಮೆ ಸಲ್ಲಿಸಲು ಸಿಟಿಜನ್ ಲಾಗಿನ್‌ಗೆ ಹಿಂದಿರುಗಿಸಬೇಕಾಗುತ್ತದೆ.<br><br>ಉಪನೋಂದಣಾಧಿಕಾರಿಗಳಿಂದ ಅನುಮೋದನೆಗೊಂಡು ಬಂದ ಅರ್ಜಿಗಳಿಗೆ ನಿಗದಿತ ಶುಲ್ಕವನ್ನು ಪಾವತಿಸಿ ದಸ್ತಾವೇಜಿನ ನೋಂದಣಿಗೆ ಉಪನೋಂದಣಿ ಕಛೇರಿಯಲ್ಲಿ ದಿನಾಂಕವನ್ನು ನಿಗದಿಪಡಿಸಿಕೊಳ್ಳಬೇಕಾಗುತ್ತದೆ. ಈ ರೀತಿ ಅರ್ಜಿದಾರರೇ ನಿಗದಿಪಡಿಸಿಕೊಂಡ ದಿನಾಂಕ ಹಾಗೂ ಸಮಯಕ್ಕೆ ನೋಂದಣಿಗೆ ಹಾಜರಾಗಬೇಕಾಗುತ್ತದೆ.<br><br>ದಸ್ತಾವೇಜುಗಳ ನೋಂದಣಿಗೆ ಅರ್ಜಿ ಸಲ್ಲಿಸುವ ಪ್ರಕ್ರಿಯೆಯೂ ಸಂಪೂರ್ಣವಾಗಿ ಆನ್‌ಲೈನ್ ಆಗಿರುವುದರಿಂದ ಕೇವಲ ನೋಂದಣಿ ದಿನಾಂಕದಂದು ಮಾತ್ರ ಉಪನೋಂದಣಿ ಕಛೇರಿಗೆ ಭೇಟಿ ನೀಡಬೇಕಾಗಿರುತ್ತದೆ.<br><br>ಕಾವೇರಿ-2.0 ತಂತ್ರಾಂಶದಲ್ಲಿ ವಿನಾ ಕಾರಣ ತಾಂತ್ರಿಕ ದೋಷದ ಕಾರಣ ನೀಡಿ ದಸ್ತಾವೇಜನ್ನು ನೋಂದಣಿ ಮಾಡದಿರಲು ಅವಕಾಶವಿರುವುದಿಲ್ಲ. |

ಕಂಇ/98/ಎಂಎನ್‌ಎಸ್‌ಎ/2026

**(ಕೃಷ್ಣ ಬೈರೇಗೌಡ)**
ಕಂದಾಯ ಸಚಿವರು

# ಅನುಬಂಧ

## ಕಾವೇರಿ-2.0 ತಂತ್ರಾಂಶದಲ್ಲಿ ನೋಂದಣಿಯಾದ ದಸ್ತಾವೇಜುಗಳ ಜಿಲ್ಲಾವಾರು ವಿವರ

| ಕ್ರ.ಸಂ | ಜಿಲ್ಲೆಯ ಹೆಸರು | | 2023-2024 | | 2024-2025 | | Apr 2025 - Feb 2026 | |
|---|---|---|---|---|---|---|---|---|
| | | | ಒಟ್ಟು ದಸ್ತಾವೇಜುಗಳ ಸಂಖ್ಯೆ | ಪ್ರತಿ ದಿನ ಸರಾಸರಿ ದಸ್ತಾವೇಜುಗಳ ಸಂಖ್ಯೆ | ಒಟ್ಟು ದಸ್ತಾವೇಜುಗಳ ಸಂಖ್ಯೆ | ಪ್ರತಿ ದಿನ ಸರಾಸರಿ ದಸ್ತಾವೇಜುಗಳ ಸಂಖ್ಯೆ | ಒಟ್ಟು ದಸ್ತಾವೇಜುಗಳ ಸಂಖ್ಯೆ | ಪ್ರತಿ ದಿನ ಸರಾಸರಿ ದಸ್ತಾವೇಜುಗಳ ಸಂಖ್ಯೆ |
| 1 | Bengaluru | Basavanagudi | 87,190 | 238.88 | 84,541 | 231.62 | 71,821 | 196.77 |
| 2 | | Gandhinagar | 77,538 | 212.43 | 69,406 | 190.15 | 57,900 | 158.63 |
| 3 | | Jayanagar | 93,306 | 255.63 | 85,199 | 233.42 | 69,652 | 190.83 |
| 4 | | Rajajinagar | 80,678 | 221.04 | 77,677 | 212.81 | 60,078 | 164.6 |
| 5 | | Shivajinagar | 1,03,127 | 282.54 | 91,541 | 250.8 | 72,518 | 198.68 |
| 6 | Bagalkot | | 84,589 | 231.75 | 97,698 | 267.67 | 91,739 | 251.34 |
| 7 | Bengaluru Rural | | 80,037 | 219.28 | 82,840 | 226.96 | 76,062 | 208.39 |
| 8 | Belgaum | | 1,62,889 | 446.27 | 1,81,644 | 497.65 | 1,59,653 | 437.41 |
| 9 | Bellary | | 56,970 | 156.08 | 53,665 | 147.03 | 58,844 | 161.22 |
| 10 | Bidar | | 54,632 | 149.68 | 54,196 | 148.48 | 55,064 | 150.86 |
| 11 | Bijapur | | 1,24,298 | 340.54 | 1,28,602 | 352.33 | 1,25,552 | 343.98 |
| 12 | Chamarajanagar | | 40,063 | 109.76 | 51,946 | 142.32 | 44,547 | 122.05 |
| 13 | Chikkaballapura | | 44,884 | 122.97 | 45,682 | 125.16 | 47,392 | 129.84 |
| 14 | Chikkamagalur | | 42,367 | 116.07 | 45,898 | 125.75 | 48,762 | 133.59 |
| 15 | Chitradurga | | 52,210 | 143.04 | 60,052 | 164.53 | 70,923 | 194.31 |
| 16 | Davangere | | 66,293 | 181.62 | 76,114 | 208.53 | 81,719 | 223.89 |
| 17 | Dharwad | | 64,096 | 175.61 | 68,862 | 188.66 | 64,964 | 177.98 |
| 18 | Gadag | | 58,079 | 159.12 | 64,248 | 176.02 | 53,574 | 146.78 |
| 19 | Gulbarga | | 81,321 | 222.8 | 82,517 | 226.07 | 87,831 | 240.63 |
| 20 | Hassan | | 60,531 | 165.84 | 72,858 | 199.61 | 69,830 | 191.32 |
| 21 | Haveri | | 61,935 | 169.68 | 74,741 | 204.77 | 77,952 | 213.57 |
| 22 | Karwar | | 71,621 | 196.22 | 86,072 | 235.81 | 85,612 | 234.55 |
| 23 | Kodagu | | 18,968 | 51.97 | 25,170 | 68.96 | 32,566 | 89.22 |
| 24 | Kolar | | 53,136 | 145.58 | 59,186 | 162.15 | 56,764 | 155.52 |
| 25 | Koppal | | 61,552 | 168.64 | 64,427 | 176.51 | 66,728 | 182.82 |
| 26 | Mandya | | 78,935 | 216.26 | 82,327 | 225.55 | 81,564 | 223.46 |
| 27 | Mangalore | | 1,28,675 | 352.53 | 1,11,316 | 304.98 | 94,120 | 257.86 |
| 28 | Mysore | | 1,41,722 | 388.28 | 1,62,357 | 444.81 | 1,66,145 | 455.19 |
| 29 | Raichur | | 81,943 | 224.5 | 87,798 | 240.54 | 89,805 | 246.04 |
| 30 | Ramanagara | | 56,660 | 155.23 | 53,393 | 146.28 | 63,267 | 173.33 |
| 31 | Shimoga | | 60,779 | 166.52 | 71,197 | 195.06 | 68,324 | 187.19 |
| 32 | Tumkur | | 98,861 | 270.85 | 1,11,688 | 305.99 | 1,18,755 | 325.36 |
| 33 | Udupi | | 63,353 | 173.57 | 62,688 | 171.75 | 54,900 | 150.41 |
| 34 | Vijayanagara | | 43,035 | 117.9 | 48,390 | 132.58 | 51,847 | 142.05 |
| 35 | Yadagiri | | 38,575 | 105.68 | 41,667 | 114.16 | 45,461 | 124.55 |